**Akashvani : Bangalore**
**National Bulletin In Kannada**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**09.08.2024** **19.35 hrs**

**<><*<><>*><>**

**ಮುಖ್ಯಾಂಶಗಳು**

- **ಸಂಸತ್ತಿನ ಉಭಯ ಸದನಗಳು ಅನಿರ್ಧಿಷ್ಟಾವಧಿಗೆ ಮುಂದೂಡಿಕೆ**
- **ರಾಜ್ಯಸಭೆ ಸಭಾಪತಿ ವಿರುದ್ಧ ಅಸಂಸದೀಯ ಹೇಳಿಕೆ- ಜಯಾ ಬಚ್ಚನ್ ವಿರುದ್ಧ ಖಂಡನಾ ನಿರ್ಣಯ ಮಂಡನೆ**
- **ಆಮ್‌ಆದ್ಮಿ ಪಕ್ಷದ ಮನೀಶ್ ಸಿಸೋಡಿಯಾಗೆ ಸುಪ್ರೀಂಕೋರ್ಟ್ ಜಾಮೀನು**
- **ಪ್ಯಾರಿಸ್ ಒಲಿಂಪಿಕ್ಸ್; ಪುರುಷರ ೫೭ ಕೆಜಿ ಫ್ರೀಸ್ಟೈಲ್ ಕುಸ್ತಿಯಲ್ಲಿ ಭಾರತದ ಅಮನ್ ಸೆಹ್ರಾವತ್ ಇಂದು ರಾತ್ರಿ ಸೆಣಸಾಟ**

**<><*<><>*><>**

ಸಂಸತ್ತಿನ ಉಭಯ ಸದನಗಳನ್ನು ಇಂದು ಅರ್ನಿಧಿಷ್ಟಾವಧಿಗೆ ಮುಂದೂಡಲಾಯಿತು. ಸಂಸತ್ತಿನ ಬಜೆಟ್ ಅಧಿವೇಶನ ಕಳೆದ ತಿಂಗಳ ೨೨ ರಂದು ಪ್ರಾರಂಭಗೊಂಡಿದ್ದು, ಸೋಮವಾರ ಮುಕ್ತಾಯಗೊಳ್ಳಬೇಕಿತ್ತು. ೧೧೫ ಗಂಟೆಗಳ ಕಾಲ ನಡೆದ ಈ ಅಧಿವೇಶನದಲ್ಲಿ ೧೫ ಸಮಾವೇಶಗಳನ್ನು ನಡೆಸಲಾಗಿದೆ ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು. ಜುಲೈ ೨೩ ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ೨೦೨೪-೨೫ಸಾಲಿನ ಕೇಂದ್ರ ಬಜೆಟ್ ಅನ್ನು ಮಂಡಿಸಿದರು, ಲೋಕಸಭೆ ೨೭ ಗಂಟೆ ೧೯ ನಿಮಿಷಗಳ ಕಾಲ ಬಜೆಟ್ ಕುರಿತು ಚರ್ಚಿಸಿತು. ಅಧಿವೇಶನದಲ್ಲಿ ೧೨ ಸರ್ಕಾರಿ ವಿಧೇಯಕಗಳನ್ನು ಮಂಡಿಸಲಾಗಿದ್ದು, ಅವುಗಳಲ್ಲಿ ನಾಲ್ಕನ್ನು ಲೋಕಸಭೆ ಅಂಗೀಕರಿಸಿದೆ ಎಂದು ಅವರು ವಿವರಿಸಿದರು. ಅಧಿವೇಶನದಲ್ಲಿ ಲೋಕಸಭೆ ಶೇಕಡಾ ೧೩೬ ರಷ್ಟು ಫಲಪ್ರದ ಕಲಾಪ ನಡೆಸಿದೆ ಎಂದು ಸ್ಪೀಕರ್ ಹೇಳಿದ್ದಾರೆ. ಹಣಕಾಸು ಮಸೂದೆ, ವಿನಿಯೋಗ ಮಸೂದೆ, ಜಮ್ಮು ಮತ್ತು ಕಾಶ್ಮೀರ ವಿನಿಯೋಗ ಮಸೂದೆ ಮತ್ತು ಭಾರತೀಯ ವಾಯುಯಾನ್ ವಿಧೆಯಕಗಳನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು. ರಾಜ್ಯಸಭೆಯ ಸಭಾಪತಿ ಜಗದೀಪ್ ಧನ್‌ಕರ್ ಮಾತನಾಡಿ, ಮೇಲ್ಮನೆಯಲ್ಲಿ ಕೇಂದ್ರ ಬಜೆಟ್ ಕುರಿತು ಸುಮಾರು ೨೨ ಗಂಟೆಗಳ ಚರ್ಚೆ ನಡೆದವು. ಅಧಿವೇಶನದಲ್ಲಿ ೯೦ ಗಂಟೆಗಳ ಕಾಲ ಕಲಾಪ ನಡೆಸಲಾಯಿತು ಎಂದರು. ಮುಂದಿನ ಅಧಿವೇಶನ, ಸದನದ ಪ್ರತಿಯೊಬ್ಬ ಸದಸ್ಯರಿಗೆ ಹಾಗೂ ಇಡೀ ದೇಶದ ಪ್ರಯೋಜನಕ್ಕಾಗಿ ಫಲದಾಯಕವಾಗಿರಲಿದೆ ಎಂಬ ಭರವಸೆ, ನಿರೀಕ್ಷೆ, ಹಾಗೂ ವಿಶ್ವಾಸದಿಂದ ಜನರು ಎದುರು ನೋಡುತ್ತಿದ್ದಾರೆ ಎಂದು ಅವರು ಹೇಳಿದರು.

**<><*<><>*><>**

ರಾಜ್ಯಸಭೆಯಲ್ಲಿಂದು, ಪ್ರತಿಪಕ್ಷ ಸಮಾಜ ವಾದಿ ಪಕ್ಷದ ಸದಸ್ಯೆ ಜಯಾ ಬಚ್ಚನ್ ಅವರು, ಸಭಾಪತಿ ಜಗದೀಪ್ ಧನ್‌ಕರ್ ಅವರ ಬಗ್ಗೆ ನೀಡಿದ ಅಸಂಸದೀಯ ಹೇಳಿಕೆಗೆ ಸಂಬಂಧಿಸಿದಂತೆ ಆಡಳಿತಾರೂಢ ಪಕ್ಷ, ಖಂಡನಾ ನಿರ್ಣಯ ಮಂಡಿಸಿದೆ. ರಾಜ್ಯಸಭೆಯ ನಾಯಕರೂ ಆಗಿರುವ ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ, ಮೇಲ್ಮನೆಯಲ್ಲಿ ವಿರೋಧ ಪಕ್ಷದ ಸದಸ್ಯರ ನಡವಳಿಕೆಯ ವಿರುದ್ಧ ಖಂಡನಾ ನಿರ್ಣಯ ಮಂಡಿಸಿದರು. ಪ್ರತಿಪಕ್ಷಗಳ ಹೇಳಿಕೆಗಳು ಅಸಂಸದೀಯ ಹಾಗೂ ಅತ್ಯಂತ ಆಕ್ಷೇಪಾರ್ಹ ಎಂದು ಅವರು ಹೇಳಿದರು. ಎಸ್‌ಪಿ ಸದಸ್ಯರ ಹೇಳಿಕೆಗೆ ಸಭಾಪತಿ, ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಪೀಠದ ಪ್ರತಿಷ್ಠೆಗೆ ಧಕ್ಕೆ ತರಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಸಭಾಪತಿಗಳ ಸ್ವರ, ಭಾಷೆ ಹಾಗೂ ಮನೋಧರ್ಮದ ಬಗ್ಗೆ ಸಮಾಜವಾದಿ ಪಕ್ಷ ಸದಸ್ಯೆಯ ಹೇಳಿಕೆಗಳನ್ನು ಪೀಠ ವಿಶೇಷವಾಗಿ ಆಕ್ಷೇಪಿಸಿತು. ಜಯಾ ಬಚ್ಚನ್ ಅವರ ಹೇಳಿಕೆಗೆ ಆಡಳಿತ ಪಕ್ಷದ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಗದ್ದಲದ ನಡುವೆಯೇ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ನಡೆಸಿದರು. ನಂತರ ಹಲವು ಸದಸ್ಯರು, ಕೇಂದ್ರ ಸಚಿವರು ಪ್ರತಿಪಕ್ಷಗಳ ನಡೆಯನ್ನು ಟೀಕಿಸಿದರು, ಸದನ ಹಾಗೂ ಸಭಾಪತಿಗಳ ಸ್ಥಾನಮಾನ ಹಾಗೂ ಸಭೆ ರೀತಿ ರಿವಾಜುಗಳನ್ನು ಹಾಳುಗೆಡವಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಶ್ನೋತ್ತರ ಅವಧಿ ನಡೆಯದ ಕಾರಣ, ಸದನವನ್ನು ಇದೇ ವಿಷಯವಾಗಿ ಮೂರು ಬಾರಿ ಮುಂದೂಡಲಾಯಿತು. ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಪ್ರತಿಪಕ್ಷಗಳ ನಡವಳಿಕೆ ಸ್ವೀಕಾರಾರ್ಹವಲ್ಲ. ಅವರು ಸಭಾಪತಿಗಳ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಸದನದ ಸದಸ್ಯರಾಗಿ ಪೀಠ ನೀಡುವ ರೂಲಿಂಗ್ ಹಾಗೂ ಮನವಿಯನ್ನು ಗೌರವಿಸುವುದು ಅತ್ಯಗತ್ಯ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು. ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ

ಖಾತೆ ರಾಜ್ಯ ಸಚಿವ ಜಯಂತ್ ಚೌಧರಿ ಮಾತನಾಡಿ, ಸಭಾಪತಿಗಳ ನಿರ್ಧಾರವನ್ನು ಪ್ರತಿಯೊಬ್ಬ ಸದಸ್ಯರು ಪಾಲಿಸಬೇಕು ಪದೇ ಪದೇ ನಿಯಮ ಉಲ್ಲಂಘಿಸುವ ಸದಸ್ಯರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಜೆಡಿಯು ಪಕ್ಷದ ಸಂಜಯ್ ಕುಮಾರ್ ಝಾ, ಸಭಾಪತಿಗಳನ್ನು "ಸಹೋದ್ಯೋಗಿ" ಎಂದು ಕರೆದಿರುವ ಪ್ರತಿಪಕ್ಷ ಸದಸ್ಯರ ನಡವಳಿಕೆ ಅತ್ಯಂತ ಅವಹೇಳನಕಾರಿ ಎಂದು ಬಣ್ಣಿಸಿದರು. ಜಯಾ ಬಚ್ಚನ್ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದರು. ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ರಾಮ್ ನಾಥ್ ಠಾಕೂರ್ ಕೂಡ ತಮ್ಮ ಪಕ್ಷದ ನಿಲುವನ್ನು ಪ್ರತಿಧ್ವನಿಸಿದರು. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಅಠಾವಳೆ ಅವರು ಇಂತಹ ಘಟನೆ ನಡೆದ ಇಂದು "ಕರಾಳ ದಿನ " ಎಂದು ಬಣ್ಣಿಸಿದರು. ಪ್ರತಿಪಕ್ಷಗಳು ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು. ಬಿಆರ್ಎಸ್ ಸದಸ್ಯ ಕೆಆರ್ ಸುರೇಶ್ ರೆಡ್ಡಿ ಮತ್ತು ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್ ಅವರು ಸಹ ಸಭಾಪತಿ ವಿರುದ್ಧ ನೀಡಿರುವ ಹೇಳಿಕೆಯನ್ನು ಖಂಡಿಸಿದರು. ಇದಕ್ಕೂ ಮೊದಲು, ಜಯಾ ಬಚ್ಚನ್ ಅವರ ಹೇಳಿಕೆಗಳ ಗದ್ದಲದ ನಡುವೆ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಆರ್‌ಜೆಡಿ ಮತ್ತು ಇತರ ಪಕ್ಷಗಳ ವಿರೋಧ ಪಕ್ಷದ ಸದಸ್ಯರು ರಾಜ್ಯಸಭೆಯಿಂದ ಸಭಾತ್ಯಾಗ ನಡೆಸಿದರು. ಶೂನ್ಯವೇಳೆ ನಂತರ ಸಭಾಪತಿ ಜಗದೀಪ್ ಧಂಖರ್, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ದ ಬಿಜೆಪಿಯ ಘನಶ್ಯಾಮ್ ತಿವಾರಿ ಅವರು ನೀಡಿದ್ದ ಆಕ್ಷೇಪಾರ್ಹ ಹೇಳಿಕೆ ಸಂಬಂಧ ಹೇಳಿಕೆ ನೀಡುತ್ತಿದ್ದರು. ಈ ವೇಳೆ ಎಸ್‌ಪಿ ಸದಸ್ಯೆ ಜಯಾ ಬಚ್ಚನ್ ಅವರು ಸಭಾಪತಿಗಳ ಬಗ್ಗೆ ಹೇಳಿಕೆ ನೀಡಿದ್ದು, ಜಗದೀಪ್ ಧನ್‌ಕರ್ ಅವರನ್ನು ಕೆರಳಿಸಿತು.

<><*<><>*><>

ದೆಹಲಿ ಅಬಕಾರಿ ಮದ್ಯ ನೀತಿ ಹಗರಣ, ಭ್ರಷ್ಟಾಚಾರ ಹಾಗೂ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಕ್ಷದ ಮುಖಂಡ ಮನೀಶ್ ಸಿಸೋಡಿಯಾ ಅವರಿಗೆ ಸುಪ್ರೀಂಕೋರ್ಟ್ ಇಂದು ಜಾಮೀನು ಮಂಜೂರು ಮಾಡಿದೆ. ಆಗಸ್ಟ್ ೬ ರಂದು ಮನೀಶ್ ಸಿಸೋಡಿಯಾ ಅವರ ಜಾಮೀನು ಅರ್ಜಿಯ ಬಗ್ಗೆ ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ಕಾಯ್ದಿರಿಸಿತ್ತು. ಸಿಸೋಡಿಯಾ ಪರ ವಕೀಲ ಅಭಿಷೇಕ್ ಸಿಂಘ್ವಿ ಹಾಗೂ ಸಿಬಿಐ ಮತ್ತು ಇಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್ ವಿ ರಾಜು ಅವರ ವಾದವನ್ನು ನ್ಯಾಯಾಲಯ ಆಲಿಸಿತ್ತು. ಮೇ ೨೧ ರಂದು ದೆಹಲಿ ಹೈಕೋರ್ಟ್ ಸಿಸೋಡಿಯಾಗೆ ಜಾಮೀನು ನೀಡಲು ನಿರಾಕರಿಸಿತ್ತು. ೧೭ ತಿಂಗಳಿಂದ ನ್ಯಾಯಾಂಗ ಬಂಧನದಲ್ಲಿರುವ ಸಿಸೋಡಿಯಾ ಪ್ರಕರಣದಲ್ಲಿ ಈವರೆಗೆ ವಿಚಾರಣೆ ಆರಂಭವಾಗಿಲ್ಲ. ತ್ವರಿತ ವಿಚಾರಣೆಗೆ ಹಿನ್ನಡೆಯಾಗಿದೆ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂಕೋರ್ಟ್‌ನ ನ್ಯಾಯಪೀಠ, ಜಾರಿ ನಿರ್ದೇಶನಾಲಯ ಹಾಗೂ ಸಿಬಿಐ ಪ್ರಕರಣಗಳೆರಡರಲ್ಲೂ ಜಾಮೀನು ನೀಡಿ ತೀರ್ಪು ಪ್ರಕಟಿಸಿದೆ.

<><*<><>*><>

ಪಕ್ಷದ ನಾಯಕ ಮನೀಶ್ ಸಿಸೋಡಿಯಾ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿರುವುದನ್ನು ಆಮ್ ಆದ್ಮಿ ಪಕ್ಷ- ಎಎಪಿ ಸ್ವಾಗತಿಸಿದೆ. ಈ ಸಂಬಂಧ ನವದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಪಕ್ಷದ ನಾಯಕ ಸಂಜಯ್ ಸಿಂಗ್, ತೀರ್ಪು ದೇಶದ ಕಾನೂನು ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವಕ್ಕೆ ಸಂದ ಜಯವಾಗಿದ್ದು, ಕಳೆದ ಹಲವು ತಿಂಗಳುಗಳಿಂದ ಜಾರಿ ನಿರ್ದೇಶನಾಲಯ ಹಾಗೂ ಸಿಬಿಐ ಸಿಸೋಡಿಯಾ ಅವರನ್ನು ಜೈಲಿನಲ್ಲಿಯೇ ಇರುವಂತೆ ನೋಡಿಕೊಳ್ಳುವ ಕೆಲಸ ಮಾಡಿವೆ ಎಂದು ಆರೋಪಿಸಿದ್ದಾರೆ. ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಡಿಎಂಕೆ ಸಂಸದೆ ಕನಿಮೊಳಿ ಹಾಗೂ ಇತರ ವಿರೋಧ ಪಕ್ಷಗಳ ಹಲವು ನಾಯಕರು ಕೂಡ ಸಿಸೋಡಿಯಾ ಅವರಿಗೆ ಜಾಮೀನು ಲಭಿಸಿರುವುದನ್ನು ಸ್ವಾಗತಿಸಿದ್ದಾರೆ. ಈ ನಡುವೆ, ಮನೀಶ್ ಸಿಸೋಡಿಯಾ ಅವರು ಈಗಲೂ ಆರೋಪಿಯಾಗಿದ್ದು, ದೆಹಲಿ ಜನರಿಗೆ ದ್ರೋಹ ಬಗೆದ ಆರೋಪ ಸಂಬಂಧ ಅವರ ಉತ್ತರಿಸುವ ಸಾಮರ್ಥ್ಯ ನ್ಯಾಯಾಲಯ ಪರಿವ್ಯಾಪ್ತಿಯಲ್ಲಿರಲಿದೆ ಎಂದು ಬಿಜೆಪಿ ಹೇಳಿದೆ. ಪಕ್ಷದ ಸಂಸದೆ ಬಾನ್ಸುರಿ ಸ್ವರಾಜ್ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಸಿಸೋಡಿಯಾ ೧೭ ರಿಂದ ೧೮ ತಿಂಗಳ ಕಾಲ ಜೈಲಿನಲ್ಲಿದ್ದರು ವಿಚಾರಣೆ ವಿಳಂಬದ ಆಧಾರದ ಮೇಲೆ ಎಎಪಿ ನಾಯಕನಿಗೆ ಜಾಮೀನು ದೊರೆತಿದೆ ಎಂದು ತಿಳಿಸಿದ್ದಾರೆ.

<><*<><>*><>

ಕರ್ನಾಟಕದ ಜೆಡಿಎಸ್ ಹಾಗೂ ಬಿಜೆಪಿ ನಾಯಕರು ಕೇಂದ್ರ ಸರ್ಕಾರದೊಂದಿಗೆ ಕೈ ಜೋಡಿಸಿ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನಲ್ಲಿಂದು ಆರೋಪಿಸಿದ್ದಾರೆ. ಜನ ಬೆಂಬಲವಿರುವ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಮೈತ್ರಿ ಪಕ್ಷಗಳಿಂದ ಸಾಧ್ಯವಿಲ್ಲ. ಸಾರ್ವಜನಿಕರೇ ಪ್ರಜಾಪ್ರಭುತ್ವದ ಸೇನಾನಿಗಳಾಗಿದ್ದು, ಸಂವಿಧಾನ ಹಾಗೂ ಸಾಮಾಜಿಕ ನ್ಯಾಯದ ರಕ್ಷಣೆಗೆ ನಿಂತ ಜನತೆಗೆ ಧನ್ಯವಾದಗಳು ಎಂದರು. ತನ್ನ ೪೦ ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲ.

ಆಸ್ತಿ ಮಾಡುವ ಹುನ್ನಾರ ನಡೆಸಿಲ್ಲ ಮತ್ತು ಯಾವುದೇ ರೀತಿಯ ಭ್ರಷ್ಟಾಚಾರದಲ್ಲಿ ತೊಡಗಿಲ್ಲ ಎಂದರು. ಬಳಿಕ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಜೆಡಿಎಸ್ ಬಿಜೆಪಿ ಪಕ್ಷಗಳು ಕ್ಷುಲ್ಲಕ ಕಾರಣಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದು, ಯಾವುದೇ ದಾಖಲೆಗಳಿಲ್ಲದೆ ವ್ಯರ್ಥ ಹೋರಾಟ ನಡೆಸುತ್ತಿವೆ ಎಂದು ಹೇಳಿದರು. ಜೆಡಿಎಸ್ ಪಕ್ಷದ ನಾಯಕರುಗಳು ನಿವೇಶನ ಪಡೆದಿರುವ ಬಗ್ಗೆ ಬಿಜೆಪಿ ಪಕ್ಷ ಪಟ್ಟಿ ಬಿಡುಗಡೆಗೊಳಿಸಿತ್ತು, ಆದರೂ ಜೆಡಿಎಸ್ ಪಕ್ಷ ಉತ್ತರ ನೀಡದೆ ಬಿಜೆಪಿಯೊಂದಿಗೆ ಕೈಜೋಡಿಸಿ ಅಕ್ರಮವಾಗಿ ಪಾದಯಾತ್ರೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ತಮ್ಮದು ಸತ್ಯದ ಪರವಾದ ಹೋರಾಟವಾಗಿದ್ದು, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಇತಿಹಾಸ ಕಾಂಗ್ರೆಸ್ ಪಕ್ಷಕ್ಕಿದೆ. ಜನಾಂದೋಲನ ಕಾರ್ಯಕ್ರಮವು ಜನರ ರಕ್ಷಣೆಗಾಗಿ ನಡೆಯುತ್ತಿದೆ ಎಂದರು. ೧೩೬ ಶಾಸಕರ ಬೆಂಬಲ ಸಿದ್ದರಾಮಯ್ಯ ಅವರ ಪರವಿದೆ. ಹೀಗಾಗಿ ಬಿಜೆಪಿ - ಜೆಡಿಎಸ್ ಗೆ ರಾಜೀನಾಮೆ ಕೇಳುವ ಯಾವುದೇ ನೈತಿಕತೆ ಇಲ್ಲ ಎಂದು ಹೇಳಿದ್ದಾರೆ.

<><*<><>*><>

ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ದಿ ಸಂಸ್ಥೆ - ಡಿಆರ್‌ಡಿಒ ಬುಲೆಟ್ ಪ್ರೂಫ್ ಜಾಕೆಟ್ ಅಭಿವೃದ್ಧಿಪಡಿಸಿದ್ದು, ಇದು ಹಗುರವಾದ ಮುಂಬಂದಿಯ ಹಾರ್ಡ್ ಆರ್ಮರ್ ಪ್ಯಾನೆಲ್ ಅನ್ನು ಒಳಗೊಂಡಿದೆ. ಲೋಕಸಭೆಯಲ್ಲಿ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಅವರು ನೀಡಿರುವ ಲಿಖಿತ ಉತ್ತರದಲ್ಲಿ, ಇದು ಮಧ್ಯಮ ಗಾತ್ರದ ೧೦ ಕಿಲೋಗ್ರಾಂ ತೂಕದ ೬ನೇ ಹಂತದ ಹಗುರವಾದ ಬುಲೆಟ್ ಪ್ರೂಫ್ ಜಾಕೆಟ್ ಆಗಿದೆ, ಇದು ಕಾರ್ಯಾಚರಣೆಯ ಸಮಯದಲ್ಲಿ ಧರಿಸಬಹುದಾಗಿದ್ದು, ಆರಾಮದಾಯಕವಾಗಿರಲಿದೆ ಎಂದು ಮಾಹಿತಿ ನೀಡಿದ್ದಾರೆ. ಈ ಜಾಕೆಟ್ ಕ್ವಿಕ್ ರಿಲೀಸ್ ಮೆಕ್ಯಾನಿಸಂನ ವೈಶಿಷ್ಟ್ಯವನ್ನು ಮತ್ತು ಇತರ ಸಂಬಂಧಿತ ವಿಶೇಷಗಳನ್ನು ಹೊಂದಿದೆ ಎಂದು ಅವರು ಹೇಳಿದರು.

<><*<><>*><>

ವಕ್ಫ್ (ತಿದ್ದುಪಡಿ) ಮಸೂದೆ, ೨೦೨೪ ಅನ್ನು ಪರಿಶೀಲಿಸಲು ಜಂಟಿ ಸದನ ಸಮಿತಿಯ ಭಾಗವಾಗಲು ಲೋಕಸಭೆ ತನ್ನ ೨೧ ಸದಸ್ಯರನ್ನು ಹೆಸರಿಸುವ ನಿರ್ಣಯವನ್ನು ಇಂದು ಅಂಗೀಕರಿಸಿತು. ಸದಸ್ಯರಲ್ಲಿ ಜಗದಾಂಬಿಕಾ ಪಾಲ್, ನಿಶಿಕಾಂತ್ ದುಬೆ, ತೇಜಸ್ವಿ ಸೂರ್ಯ, ದಿಲೀಪ್ ಸೈಕಿಯಾ, ಗೌರವ್ ಗೊಗೊಯ್, ಇಮ್ರಾನ್ ಮಸೂದ್, ಮೊಹಮ್ಮದ್ ಜಾವೇದ್, ಕಲ್ಯಾಣ್ ಬ್ಯಾನರ್ಜಿ ಹಾಗೂ ಅಸಾದುದ್ದೀನ್ ಓವೈಸಿ ಸೇರಿದ್ದಾರೆ. ಸಮಿತಿಯು ರಾಜ್ಯಸಭೆಯ ಹತ್ತು ಸದಸ್ಯರನ್ನೂ ಒಳಗೊಂಡಿರಲಿದೆ.

<><*<><>*><>

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಇಂದು ಕುಸ್ತಿಯಲ್ಲಿ, ಭಾರತದ ಅಮನ್ ಸೆಹ್ರಾವತ್ ಪುರುಷರ ೫೭ ಕೆಜಿ ಫ್ರೀಸ್ಟೈಲ್ ವಿಭಾಗದ ಪಂದ್ಯದಲ್ಲಿ ಕಂಚು ಪದಕಕ್ಕಾಗಿ ಸೆಣಸಲಿದ್ದಾರೆ. ಭಾರತೀಯ ಕಾಲಮಾನ ರಾತ್ರಿ ೧೦.೪೫ ಕ್ಕೆ ನಡೆಯುವ ಪಂದ್ಯದಲ್ಲಿ ಅವರು, ಪೊರ್ಟೋರಿಕೊದ ಡೆರಿಯನ್ ಕ್ರೂಸ್ ಅವರನ್ನು ಎದುರಿಸಲಿದ್ದಾರೆ. ಅಥ್ಲೆಟಿಕ್ಸ್‌ನಲ್ಲಿ, ಪುರುಷರ ೪೦೦ ಮೀಟರ್ ರಿಲೇಯಲ್ಲಿ ಭಾರತ ತಂಡ ನಾಲ್ಕನೇ ಸ್ಥಾನ ಹಾಗೂ ಮಹಿಳೆಯರ ೪೦೦ ಮೀಟರ್ ರಿಲೇಯಲ್ಲಿ ಭಾರತೀಯ ತಂಡ ೮ ಸ್ಥಾನಗಳಿಸುವುದರೊಂದಿಗೆ ಸ್ಪರ್ಧೆಯಿಂದ ಹೊರಬಿದ್ದಿವೆ. ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಮಹಿಳೆಯರ ೫೦ ಕೆಜಿ ಸ್ಪರ್ಧೆಯಲ್ಲಿ ಬೆಳ್ಳಿ ಪದಕವನ್ನು ನೀಡುವಂತೆ ಕುಸ್ತಿಪಟು ವಿನೇಶ್ ಫೋಗಟ್ ಮಾಡಿದ ಮನವಿಯನ್ನು ಆಲಿಸಲು ಕ್ರೀಡಾ ಮಧ್ಯಸ್ಥಿಕೆ ನ್ಯಾಯ ಮಂಡಳಿ -ಸಿಎಎಸ್ ಸಮ್ಮತಿಸಿದ್ದು, ಕ್ರೀಡಾಕೂಟದ ಅಂತ್ಯದ ಮೊದಲು ನಿರ್ಧಾರವನ್ನು ನೀಡಲಾಗುವುದು ಎಂದು ಹೇಳಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**